ಕವಿತೆ



ಎಸ್. ಶೇಷಾದ್ರಿ ಕಿನಾರ
ಕಲೆ: ಎಸ್.ವಿ. ಹೂಗಾರ್

# ಕೃಷ್ಣ ಕವನಗಳು



## ಸ್ಮರಣೆ

ರಾಧೆ ಕಾದೇ
ಕಾದಳು
ಕೃಷ್ಣ ಬರಲೆಂದು
ಕೊಳಲದನಿ
ಊರೆಲ್ಲ ತುಂಬಿ
ನೀರಾಗಿ ಹರಿಯಿತು
ಹರಿದ ಕಡೆ
ಹರಿನಾಮ
ಸ್ಮರಣೆಯೊಂದೇ
ಸಾಲದೇ

## ಪಾಡು

ತುಂಬಿ ಹರಿವ
ಯಮುನೆಯಲ್ಲಿ
ಈಜು ಬಿದ್ದ
ಹರಿ
ಸುತ್ತಿ ಸುಳಿದು
ಬಳಸಿದ
ಯಮುನೆ
ಅವನ
ಹಂದಾಡಲು
ಬಿಡದೆ
ನಿಂತಲ್ಲೆ
ಮಣಿದಳು.

## ಭಾರ

ಕೃಷ್ಣನ ತೂಗುವ
ಬಂಗಾರ
ಊರಲ್ಲೆಲ್ಲೂ
ದೊರೆಯಲಿಲ್ಲ
ಅರಮನೆಯ
ಚಿನ್ನ ಸಾಲಲಿಲ್ಲ

ಆನೆಯ ಭಾರ
ಆನೆಗೆ
ಇರುವೆಯ
ಭಾರ
ಇರುವೆಗೆ
ಕೃಷ್ಣನಭಾರ
ತುಳಸಿಗೆ

ತುಳಸಿ
ತೂಗಿದಳು
ಎಲ್ಲ
ಹಗುರಾದರು.